## ಹಾರ್ಲಿಕ್ಸ್ ಬಾಟ್ಲಿ!

ನನ್ನ ಅಪ್ಪನಿಗೆ ತಲೆಯಲ್ಲಿ ವಿಪರೀತ ಹೊಟ್ಟಾಗಿ ತುರಿಕೆ ತಾಳಲಾರದೆ ತಲೆಹೊಟ್ಟಿನ ಪರಿಹಾರಕ್ಕೆ ತೀರ್ಥಹಳ್ಳಿಯ ಪಂಡಿತರ ಬಳಿ ಹೋಗಿದ್ದರು.

ಪರೀಕ್ಷಿಸಿದ ಪಂಡಿತರು, 'ಮುಂದಿನ ವಾರ ತಲೆಗೆ ಹಚ್ಚಲು ಇಲ್ಲೇ ತಾಜಾ ತೈಲ ಮಾಡಿಕೊಡುತ್ತೇನೆ ಬರುವಾಗ ಹಾರ್ಲಿಕ್ಸ್ ಬಾಟ್ಲಿ ತನ್ನಿ' ಎಂದರು.

ಅಪ್ಪ ಹೊಸ ಹಾರ್ಲಿಕ್ಸ್ ಬಾಟ್ಲಿ ಕೊಂಡು ಪಂಡಿತರ ಮುಂದೆ 'ನೀವು ಒಂದು ಕೆ.ಜಿ ಹಾರ್ಲಿಕ್ಸ್ ಹೇಳಿದ್ರೋ ಅಥವಾ ಅರ್ಧ ಕೆ.ಜಿ ಹೇಳಿದ್ರೋ ನಾನು ಸರಿಯಾಗಿ ಕೇಳಿಕೊಂಡು ಹೋಗಲಿಲ್ಲ. ಏನಾದರಾಗಲಿ ಎಂದು ಒಂದು ಕೆ.ಜಿ ಹಾರ್ಲಿಕ್ಸ್ ತಂದೆ' ಎಂದು ಪಂಡಿತರ ಮುಂದಿಟ್ಟಾಗ, ಅವರು ಕಿಸಿಕಿಸಿ ನಗುತ್ತಾ, 'ಅಲ್ಲ ಯಜಮಾನ್ರೆ ನಾನು ಹೇಳಿದ್ದು, ತೈಲ ಹಾಕಲಿಕ್ಕೆ ಖಾಲಿ ಹಾರ್ಲಿಕ್ಸ್ ಬಾಟ್ಲಿ ಇದ್ದರೆ ತನ್ನಿ ಅಂತ' ಎಂದರು.

ಅಪ್ಪ, ನಾಚಿಕೆಯಿಂದ ಪೆಚ್ಚಾದ್ರಂತೆ. ಈ ವಿಷಯ ಮನೆಗೆ ಬಂದು ಹೇಳುತ್ತಿದ್ದಂತೆ ನಾವೆಲ್ಲಾ ಏನು ಎತ್ತ ಎಂದು ಕೇಳದ ಅಪ್ಪನ ಅಮಾಯಕತನಕ್ಕೆ ನಕ್ಕಿದ್ದೇ ನಕ್ಕಿದ್ದು. ಇದು ಹಳೇ ಘಟನೆಯಾದರೂ ಈಗಲೂ ಹಾರ್ಲಿಕ್ಸ್ ಬಾಟ್ಲಿ ನೋಡುತ್ತಿದ್ದಂತೆ ನೆನಪಾಗುತ್ತೆ.




**ಅನಸೂಯಾ ತ್ರಿವಿಕ್ರಮ್**

## ಕಣ್ಣಾಗಿರಬೇಕಾದ ಕಾಲ!

ಕನ್ನಡದ ಶಿಕ್ಷಕರಾದ ರಮೇಶ್ ಅವರು ಆಗಾಗ ತಮ್ಮ ತರಗತಿಗಳಲ್ಲಿ ಹೇಳುತ್ತಿದ್ದ ಮಾತುಗಳು 'ಪ್ರಶ್ನೆಯನ್ನು ಒಂದಲ್ಲ ಎರಡು ಬಾರಿ ಓದಿ ಅರ್ಥೈಸಿಕೊಳ್ಳಿ. ಆದರಲ್ಲೇ ಉತ್ತರ ಅಡಕವಾಗಿರುತ್ತೆ ಸ್ವಲ್ಪ ಯೋಚಿಸಿ' ಅಂತ.

ಇದನ್ನೇ ಮನನ ಮಾಡಿಕೊಂಡಿದ್ದ ಮುರಳಿ ಪರೀಕ್ಷೆಯಲ್ಲಿ ಪ್ರಶ್ನೆ ಓದಿಕೊಂಡ: 'ನಮ್ಮ ನೆರೆಹೊರೆಯ ರಾಷ್ಟ್ರಗಳು ತಮ್ಮತಮ್ಮ ಮಿಲಿಟರಿ ಶಕ್ತಿಯನ್ನು ಗಣನೀಯವಾಗಿ ಹೆಚ್ಚಿಸಿಕೊಂಡಿವೆ. ಇದು ಯಾವ ಕಾಲ?' ಎಂಬ ಪ್ರಶ್ನೆ ಕೇಳಲಾಗಿತ್ತು.

ಮುರಳಿ ಈ ಪ್ರಶ್ನೆಯನ್ನು ಎರಡು ಬಾರಿ ಮನಸ್ಸಿನಲ್ಲಿಯೇ ಓದಿಕೊಂಡ. ನಂತರ ನಮ್ಮ ನೆರೆಹೊರೆಯ ರಾಷ್ಟ್ರಗಳು ತಮ್ಮ ತಮ್ಮ ಮಿಲಿಟರಿ ಶಕ್ತಿಯನ್ನು ಗಣನೀಯವಾಗಿ ಹೆಚ್ಚಿಸಿಕೊಂಡಿವೆ ಅಂದರೆ, ಖಂಡಿತವಾಗಿಯೂ ನಮ್ಮ ದೇಶದವರು ಮೈಯೆಲ್ಲ ಕಣ್ಣಾಗಿರಬೇಕಾದ ಕಾಲ!' ಅಂತ ಉತ್ತರ ಬರೆದ.



**ಮಲ್ಲಿಕಾರ್ಜುನ ಸುರಧೇನುಪುರ**